ಅನುಬಂಧ – I

2. ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಮಂತ್ರಿ) : ಮಾನ್ಯ ಅಧ್ಯಕ್ಷರೇ, ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷೆಣಿಯರು : ಪ್ರಸ್ತಾವ ಏನೆಂದರೆ "ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992ನ್ನು ಮಂಡಿಸಲು ಅನುಮತಿ ನೀಡುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು. ಮತ್ತೆ ಅನುಮತಿ ನೀಡಲಾಯಿತು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಮಂತ್ರಿ) : ಮಾನ್ಯ ಅಧ್ಯಕ್ಷರೇ, ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷೆಣಿಯವರು : ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ – I

ಅನುಬಂಧ – II

ವಿತ್ತೀಯ ಕಾರ್ಯಕಲಾಪಗಳು

ಭಾರತ ಸಂವಿಧಾನ 205 (1)ನೇ ಅನುಚ್ಛೇದದ

1992–93ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ :

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 205 (1)ನೇ ಅನುಚ್ಛೇದದ 1992–93ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಸಭೆಯ ಮುಂದೆ ಮಂಡಿಸಲಾಯಿತು.

ಉಪಾಧ್ಯಕ್ಷೆಣಿಯವರು : ಅನುಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಲಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : (ಶಿಕಾರಿ ಪುರ) ಮುಖ್ಯಮಂತ್ರಿಗಳು ಮಂಡನೆ ಮಾಡಲಿ. ಆದರೆ ಪ್ರತಿಗಳು ಇದುವರೆಗೆ ನಮಗೆ ಸಿಕ್ಕಿಲ್ಲ. ಇದನ್ನು ಯಾವುದೇ ತರಾತುರಿಯಲ್ಲಿ ಪಾಸ್ ಮಾಡುವುದಕ್ಕೆ ಆಗುವುದಿಲ್ಲ. ಕೋಟ್ಯಾಂತರ ರೂಪಾಯಿ ವಿನಿಯೋಗವಾಗಿರತಕ್ಕಂಥ ಸಂದರ್ಭದಲ್ಲಿ, ಮುಂಚಿತವಾಗಿ ನಮಗೆ ಪ್ರತಿಗಳನ್ನು ಕಳಿಸಿ ಅದನ್ನು ಅಭ್ಯಾಸ ಮಾಡಿದರೆ ಮಾತ್ರ ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ.

ಇವತ್ತು ರಾಷ್ಟ್ರಪತಿಯ ಚುನಾವಣೆಯ ಸಂದರ್ಭದ ಮಧ್ಯದಲ್ಲಿ ಇದನ್ನು ತಂದು ಪಾಸ್ ಮಾಡುವಂತಹದ್ದು; ನಿಜಕ್ಕೂ ಸಹ ಇದು ಸರಿಯಾದ ಚರ್ಚೆಗೆ ಅವಕಾಶವಾಗುವುದಿಲ್ಲ. ಇದು ಕೋಟ್ಯಾಂತರ ರೂಪಾಯಿಗಳ ಪಣಕಾಸಿಗೆ ಸಂಬಂಧಪಟ್ಟಂಥ ವಿಷಯ. ದಯಮಾಡಿ ನೀವು ನಮ್ಮ ರಕ್ಷಣೆಗೆ ಬರಬೇಕು. ತಾವು ನೋಡಿ, ಹಿಂದೆ ಇದಕ್ಕೆ ಸಂಬಂಧಪಟ್ಟ ಕಾಫಿಯನ್ನು ಶಾಸಕರಿಗೆ ಕೊಡುತ್ತಿದ್ದರು; ತದನಂತರ ದೀರ್ಘವಾದ ಚರ್ಚೆಯಾಗುತ್ತಿತ್ತು. ಇವತ್ತು, ಈ ನಿಮಿಷದವರೆಗೆ ಈ ಪದ್ಧತಿಯನ್ನು ಅನುಸರಿಸಿದರೆ ಇದೊಂದು ದೊಡ್ಡ ಅಪರಾಧವಾಗುತ್ತಿದೆ. ಏಕೆಂದರೆ, ನಮ್ಮ ಬಜೆಟ್ ಸಂದರ್ಭದಲ್ಲೂ ಸರಿಯಾದ ಚರ್ಚೆಯಾಗಲಿಲ್ಲ. ಹಾಗೆಯೇ ಬಜೆಟ್‌ನ್ನು ಪಾಸ್ ಮಾಡುವಂಥ ವಿಶೇಷವಾದ, ವಿಚಿತ್ರವಾದ ಸಂಗತಿ ಒದಗಿಬಂತು. ಅದಕ್ಕೋಸ್ಕರ ದಯಮಾಡಿ, ಇದನ್ನು ಇಲ್ಲಿ ಇಡತಕ್ಕ ಅಗತ್ಯ ಇಲ್ಲ. ಮೊದಲು ನಮಗೆ ಕಾಫಿಯನ್ನು ಓದಗಿಸಿ, ಇದಾದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷೆಣಿಯವರು : ಇದು ಏನಿದ್ದರೂ ಪ್ರಸೆಂಟ್ ಮಾಡಿದಮೇಲೆ ತಮಗೆ ಕಾಪಿಯನ್ನು ವಿತರಣೆ ಮಾಡುತ್ತಾರೆ. ವಿತರಣೆ ಮಾಡಿದ ಮೇಲೆ ಸ್ವಲ್ಪ ಸಮಯ ಕೊಟ್ಟು ಆಮೇಲೆ ಬೇರೆ ವಿಷಯಗಳನ್ನು ತೆಗೆದುಕೊಂಡು, ನಂತರ ಇದನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ವಿತರಣೆ ಮಾಡಿದ ಮೇಲೆ ಇವತ್ತು ಚರ್ಚೆ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ಏನಿದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ಅದಕ್ಕೋಸ್ಕರ ದಯಮಾಡಿ ಚರ್ಚೆಯನ್ನು ಮುಂದಕ್ಕೆ ಹಾಕಬೇಕು.

ಉಪಾಧ್ಯಕ್ಷೆಣಿಯವರು : ಈಗ ಅವರು ಪ್ರಸೆಂಟ್ ಮಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಸೆಂಟ್ ಮಾಡುವುದಕ್ಕೆ ಮುಂಚೆಯೇ ತಮ್ಮ ಗಮನಕ್ಕೆ ತರತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಾವು ಇಷ್ಟು ವರ್ಷ ನೋಡಿದ ಹಾಗೆ, ನಮಗೆ ಗೊತ್ತಿರುವ ಹಾಗೆ, ಇದನ್ನು ಯಾವಾಗಲೂ ಮೊದಲೇ ಕಳುಹಿಸುವುದಿಲ್ಲ. ಇದನ್ನು ಪ್ರಸೆಂಟ್ ಏನು ಮಾಡುತ್ತಾರೆ, ಮಾಡಿದ ಮೇಲೆ ಕಾಪಿ ತಮಗೆ ಬರುತ್ತದೆ, ನಂತರ ತಕ್ಷಣ ಚರ್ಚೆ ಮಾಡಿ ಎಂದು ಹೇಳುವುದಿಲ್ಲ. ಈ ರೀತಿ ಕೊಟ್ಟಮೇಲೆ, ಬೇರೆ ವಿಷಯಗಳನ್ನು ತೆಗೆದುಕೊಂಡು, ಅನಂತರ ಇದನ್ನು ಚರ್ಚೆಗೆ ತೆಗೆದುಕೊಂಡು ಪಾಸ್ ಮಾಡಬೇಕಾಗುತ್ತದೆ. ಹಿಂದೆ ಒಂದು ಸಾರಿ ಏನು ಮಾಡಿದ್ದಾರೆ ಗೊತ್ತೇ, ಪ್ರಸೆಂಟ್ ಮಾಡಿದ ತಕ್ಷಣ ಚರ್ಚೆ ಮಾಡಿಯೋ ಅಥವಾ ಚರ್ಚೆ ಇಲ್ಲದೆಯೇ ಪಾಸ್ ಆಗಿದೆ. ತಮಗೆ ಗೊತ್ತಿರುವ ಹಾಗೆ ಇದು ಮೊದಲನೇ ಕಂತು, ಈ ಕಾಪಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ನಾವು ಅಲ್ಲಿ ಕುಳಿತಾಗ, ಎಷ್ಟೋ ಸಾರಿ ಚರ್ಚೆ ಇಲ್ಲದೆ ಮಂಜೂರಾತಿ ಕೊಟ್ಟಿದ್ದೇವೆ. ಏಕೆಂದರೆ, ಇದು ಪಾಸ್ ಮಾಡಲೇಬೇಕಾದ ವಿಚಾರ. ನೀವು ಚರ್ಚೆ ಮಾಡಬಾರದು ಎಂಬ ಅಭಿಪ್ರಾಯದಿಂದ ಈ ಮಾತನಾಡುತ್ತಾ ಇಲ್ಲ. That is not at all my intention but the point is, ಎಷ್ಟೋ ಸಾರಿ ಚರ್ಚೆ ಇಲ್ಲದೆ ಪಾಸ್ ಆಗಿರುವುದೂ ಉಂಟು. ಇವೆಲ್ಲಾ ಆಗಬೇಕಾದ, ರಾಜ್ಯಾಂಗಬದ್ಧವಾದ ವಿಚಾರಗಳು. ಈಗ ಬರಗಾಲದ ವಿಚಾರ ಮತ್ತೊಂದು ಚರ್ಚೆ ಮಾಡಿ. ಇದರಲ್ಲಿ ಇಷ್ಟೇ ಪಾಯಿಂಟ್ಸ್ ಇರತಕ್ಕಂಥಾದ್ದು. ಇದರ ಬಗ್ಗೆ ನಾನು ಏನು ಹೇಳಬೇಕೋ ಅದನ್ನು ಹೇಳುತ್ತೇನೆ. ಆಮೇಲೆ ನೀವು ಚರ್ಚೆ ಮಾಡಿ. ಈಗ ಬೇರೆ ವಿಷಯ ಇದ್ದರೆ ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಅತ್ಯಂತ ಪ್ರಮುಖವಾದ ವಿಷಯ. ಇದರ ಬಗ್ಗೆ ಚರ್ಚೆ ಮಾಡಿ, ಅಲ್ಲಿರತಕ್ಕ ನ್ಯೂನತೆಗಳನ್ನು, ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತಂದು, ಸರಿಪಡಿಸತಕ್ಕ ಅಗತ್ಯ ಇದೆ. ತಾವು ಈಗ ಪ್ರಸೆಂಟ್ ಮಾಡಿ ಆದರೆ ಚರ್ಚೆ ಮತ್ತು ವೋಟಿಂಗ್ ಮಾತ್ರ ಮುಂದಕ್ಕೆ ಹಾಕಬೇಕು, ಇದೇ ನಮ್ಮ ಉದ್ದೇಶ.

ಶ್ರೀ ಎಸ್. ಬಂಗಾರಪ್ಪ : ಇವತ್ತು ಇದು ಪಾಸ್ ಆಗಲೇಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟೊಂದು ತರಾತುರಿಯಲ್ಲಿ ಪಾಸ್ ಮಾಡತಕ್ಕ ಅಗತ್ಯ ಏನು? ಇದು ಇಲ್ಲಿ ಚರ್ಚೆ ಆಗಲೇಬೇಕು.

ಶ್ರೀ ಎಸ್. ಬಂಗಾರಪ್ಪ : ನನಗೆ ಗೊತ್ತಿರುವ ಹಾಗೆ ಎಷ್ಟೋ ಸಾರಿ ಚರ್ಚೆ ಇಲ್ಲದೇ ನಾವು ಪಾಸ್ ಮಾಡಿದ್ದೇವೆ. ನೀವು ಮುಂದಿನ ಸಾರಿ ಎಂದು ಹೇಳಿದರೆ, ಆ ರೀತಿ ಬರುವುದಿಲ್ಲ, ಮಾನ್ಯ ಅಧ್ಯಕ್ಷರೇ, ತಾವು ಸದನದ ಅಭಿಪ್ರಾಯವನ್ನು ತೆಗೆದುಕೊಂಡು ತೀರ್ಮಾನ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಪ್ರಸೆಂಟ್ ಮಾಡುವುದಕ್ಕೆ ವಿರೋಧ ಇಲ್ಲ. ಆದರೆ, ಸಾಕಷ್ಟು ಚರ್ಚೆಯಾಗಬೇಕಾಗಿದೆ, ಅದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷೆಣಿಯವರು : ಈಗ 68ನೇ ನಿಯಮದ ಮೇರೆಗೆ ಅಲ್ಪಕಾಲಾವಧಿ ಚರ್ಚೆ, ಮಾನ್ಯ ಕಮರುಲ್ ಇಸ್ಲಾಂರವರು ಚರ್ಚೆಯನ್ನು ಪ್ರಾರಂಭ ಮಾಡಬಹುದು.

ನಿಯಮ 68ರ ಮೇರೆಗೆ ಅಲ್ಪಾವಧಿ ಚರ್ಚೆ.

ವಿಷಯ : ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಉಂಟಾದ ಅನಾವೃಷ್ಟಿ ಹಾಗೂ ಕುಡಿಯುವ ನೀರಿನ ತೀವ್ರ ತೊಂದರೆ ಬಗ್ಗೆ.